# ಗೋವಿಂದ ಬದುಕಿನ ಬಿರುಕಿನ ಮೇಲೆ ಫೋಕಸ್



ನಟ ಗೋವಿಂದ ಒಂದು ರಿಯಾಲಿಟಿ ಶೋನಲ್ಲಿ ದಿವಿನಾದ ಕುರ್ಚಿ ಮೇಲೆ ಕುಳಿತಿದ್ದರು. ತಾವು ನಟನಾಗಿದ್ದಾಗ ಸೆಟ್‌ಗೆ ಹೋದರೆ ಅಸಡ್ಡೆಯಿಂದ ಅನೇಕರು ನೋಡುತ್ತಿದ್ದುದನ್ನು ನೆನಪಿಸಿಕೊಂಡರು. ಅದೇ ಕಾಲದಲ್ಲಿ ಚಿತ್ರೋದ್ಯಮದ ನಂಟು ಇರುವಂತಹ ಬೇರೆ ನಟರಿಗೆ ಸಿಗುತ್ತಿದ್ದ ಮರ್ಯಾದೆ ಬೇರೆಯದೇ ಆಗಿತ್ತೆಂದು ಅಲವತ್ತುಕೊಂಡರು. ಬಾಡಿದ ಮುಖ ಹೊತ್ತು ತಮ್ಮ ಕಾಲದ ಸಂಕಟವನ್ನು ಅವರು ಹೀಗೆ ಹಂಚಿಕೊಂಡಿದ್ದರು.

ಈ ಘಟನೆ ನಡೆದ ಕೆಲವೇ ದಿನಗಳಲ್ಲಿ ಅವರಿಗೂ ಅವರ ಪತ್ನಿ ಸುನಿತಾ ಅಹುಜಾ ಅವರಿಗೂ ವಿವಾಹ ವಿಚ್ಛೇದನ ಆಗುವುದರಲ್ಲಿದೆ ಎನ್ನುವ ಸುದ್ದಿ ರೆಕ್ಕೆ–ಪುಕ್ಕ ಹಚ್ಚಿಕೊಂಡಿದೆ.

ಎಲ್ಲವೂ ಶುರುವಾದದ್ದು ಸುನಿತಾ ಅವರು ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಿಂದ. ಗೋವಿಂದ ಜನರೊಟ್ಟಿಗೆ ಗಂಟೆಗಟ್ಟಲೆ ಮಾತಾಡುವವರ ಪೈಕಿ. ತಮಗೆ ತಾವಾಯಿತು, ತಮ್ಮ ಮಕ್ಕಳಾಯಿತು ಎಂದು ಆರಾಮಾಗಿ ಇರಬೇಕೆಂಬ ಬಯಕೆ. ಹೀಗಾಗಿ ಇಬ್ಬರೂ ಬೇರೆ ಬೇರೆ ಮನೆಗಳಲ್ಲಿ ವಾಸ ಮಾಡುತ್ತಿರುವುದಾಗಿ ಅವರು ಇದ್ದ ಕಿಡಿಯೊಂದನ್ನು ಮಾತಿನಲ್ಲಿ ಕಾಣಿಸಿದರು.

ಆಮೇಲೆ ಗೋವಿಂದ ಅವರ ವಕೀಲರು ಹಾಗೂ ಸುನಿತಾ ಪರ ವಕೀಲರು ಮಾಧ್ಯಮಗಳ ಮೈಕುಗಳಿಗೆ ಬಾಯೊಡ್ಡಿದರು.

ಗೋವಿಂದ ಅವರ ವಕೀಲ ಲಲಿತ್ ಬಿಂದಲ್ ಪ್ರಕಾರ ದಂಪತಿ ಈಗ ಒಟ್ಟಾಗಿಯೇ ಇದ್ದಾರೆ.

ಆರು ತಿಂಗಳ ಹಿಂದೆ ಸುನಿತಾ ಅವರು ವಿವಾಹ ವಿಚ್ಛೇದನಕ್ಕೆ ಅರ್ಜಿ ಹಾಕಿದ್ದು ನಿಜ. ಆಮೇಲೆ ಇಬ್ಬರ ನಡುವೆ ಸಂವಾದ ನಡೆದು, ಸಮಸ್ಯೆ ಬಗೆಹರಿದಿದೆ. ಹೊಸ ವರ್ಷದಲ್ಲಿ ದಂಪತಿ ಒಟ್ಟಾಗಿ ನೇಪಾಳದ ಪಶುಪತಿನಾಥ ದೇವಾಲಯಕ್ಕೆ ಹೋಗಿ, ಪೂಜೆ ಸಲ್ಲಿಸಿ ಬಂದಿದ್ದಾರೆ. ಸುನಿತಾ ಸಂದರ್ಶನ ನೀಡಿದ ಪಾಡ್‌ಕಾಸ್ಟ್‌ನವರು ಅವರ ಮಾತುಗಳನ್ನು ತುಂಡು ತುಂಡಾಗಿ ತೋರಿಸಿ ಅನರ್ಥಕ್ಕೆ ಎಡೆಮಾಡಿಕೊಟ್ಟರು ಎಂದು ಲಲಿತ್ ಹೇಳುವುದರೊಂದಿಗೆ ಮಾಧ್ಯಮಗಳಲ್ಲಿ ಹಾರುತ್ತಿದ್ದ ಗಾಳಿಪಟವೊಂದು ಕೆಳಗೆ ಇಳಿಯಿತು.

ಗೋವಿಂದ ಹಾಗೂ ಸುನಿತಾ ಮದುವೆಯಾಗಿ 38 ವರ್ಷಗಳಾಗಿದ್ದವು. ಸಂಸದ ಆದ ನಂತರ ತಮ್ಮ ಅಪಾರ್ಟ್‌ಮೆಂಟ್ ಎದುರೇ ಒಂದು ಬಂಗಲೆಯನ್ನು ನಟ ಖರೀದಿಸಿದರು. ಅಲ್ಲಿಗೆ ಬಂದು ಹೋಗುವವರು ಹೆಚ್ಚು. ಕೆಲವೊಮ್ಮೆ ನಡುರಾತ್ರಿಯಾದರೂ ಗೋವಿಂದ ಅವರ ಮಾತುಕತೆ ಮುಗಿದಿರುವುದಿಲ್ಲ. ಇದನ್ನು ಕಂಡು ಸುನಿತಾ ಆಡಿರಬಹುದಾದ ಮಾತನ್ನು ತಪ್ಪಾಗಿ ಗ್ರಹಿಸಿರಬಹುದು ಎಂದು ವಕೀಲರು ಸಮಜಾಯಿಷಿ ಕೊಟ್ಟರು.

ವಿಚ್ಛೇದನದ ಸುದ್ದಿ ಹರಿದಾಡಿದ ತಕ್ಷಣ ಗೋವಿಂದ ತಮ್ಮ ಸಾಮಾಜಿಕ ಮಾಧ್ಯಮದಲ್ಲಿ ಒಂದು ಪೋಸ್ಟ್ ಹಾಕಿ, ನಿಜ ಸಂಗತಿ ಏನೆಂದು ಸ್ಪಷ್ಟಪಡಿಸಬಹುದಿತ್ತಲ್ಲವೇ ಎಂಬ ಪ್ರಶ್ನೆಯನ್ನು ಅವರ ಅಭಿಮಾನಿಗಳೇ ಕೇಳುತ್ತಿದ್ದಾರೆ. ■



## 'ಮೆಥಡ್ ಆ್ಯಕ್ಟಿಂಗ್'ಗೆ ಪರೇಶ್ ಸೂಜಿಮೊನೆ

'ಪದ್ಮಾವತ್' ಸಿನಿಮಾದಲ್ಲಿ ರಣವೀರ್ ಸಿಂಗ್ ಅಲ್ಲಾವುದ್ದೀನ್ ಖಿಲ್ಜಿ ಪಾತ್ರವನ್ನು ನಿರ್ವಹಿಸಿದ್ದರು. ಅವರು ಪಾತ್ರದ ಪರಕಾಯ ಮಾಡುವ ಪ್ರಕ್ರಿಯೆಯಲ್ಲಿ ಖಿನ್ನತೆಗೆ ಒಳಗಾಗಿದ್ದಾಗಿ ಆಗ ಹೇಳಿಕೊಂಡಿದ್ದರು. ಚಿತ್ರೀಕರಣ ಮುಗಿದ ನಂತರವೂ ಪಾತ್ರದ ಆತ್ಮ ತಮ್ಮೊಳಗೇ ಉಳಿದು, ಕಾಡುತ್ತಿತ್ತು ಎನ್ನುವುದು ಅವರ ಅನುಭವ ನುಡಿ. ಇದನ್ನು ಸಿನಿಮಾ ವಯ್ಯಾಕರಣಿಗಳು 'ಮೆಥಡ್ ಆ್ಯಕ್ಟಿಂಗ್' ಎಂದು ಕರೆಯುತ್ತಾರೆ.

ನಟ ಪರೇಶ್ ರಾವಲ್ ಅವರು ಈ ರೀತಿ ಅಭಿನಯವನ್ನು ಒಪ್ಪುವುದಿಲ್ಲ. ಸಿನಿಮಾ ಅಭಿನಯ ಕೌಶಲವೇನೋ ಹೌದು. ಪಾತ್ರದ ಪರಕಾಯ ಪ್ರವೇಶ ಮಾಡುವುದೆಂದರೆ ಅದನ್ನು ಸದಾ ಕಾಲ ಆವಾಹಿಸಿಕೊಂಡು ಕೂರುವುದಲ್ಲ. ಸಾಕ್ಷಿ ಭಾವವೊಂದು ಮನುಷ್ಯನಲ್ಲಿ ಸದಾ ಇರಬೇಕು. ಒಬ್ಬ ಮನುಷ್ಯ ಕಂಠಪೂರ್ತಿ ಕುಡಿದ ನಂತರ ತನ್ನ ಅಮ್ಮನ ಮನೆಗೋ, ಹೆಂಡತಿಯ ಮನೆಗೋ ಹೋಗಿ ಮಲಗುತ್ತಾನೆ, ಬೇರೆ ಯಾರದೋ ಮನೆಗೆ ಹೋಗುವುದಿಲ್ಲ. ಇದನ್ನೇ ಸಾಕ್ಷಿ ಭಾವ ಎನ್ನುವುದು. ಇಂತಹ ಭಾವ ನಟ–ನಟಿಯರಿಗೂ ಇರಬೇಕು ಎಂದು ಪರೇಶ್ ರಾವಲ್ ಇತ್ತೀಚೆಗೆ ಕಿವಿಮಾತು ಹೇಳಿರುವ ವಿಡಿಯೊ ಹರಿದಾಡಿದೆ. ■